**ದಿನಾಂಕ 04.07.2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಶ್ರೀ ಎಂ.ಎಸ್.ಆರ್. ಪ್ರತಿವಾದಿ ಪರ ವಕೀಲರಿಂದ**

ನಾನು ಎಸ್.ಎಸ್.ಎಲ್.ಸಿ.ವರೆಗೆ ವ್ಯಾಸಂಗ ಮಾಡಿದ್ದೇನೆ. ಪ್ರತಿವಾದಿ ನನಗೆ 2014 ರಿಂದ ಪರಿಚಯವಾದರು. ಪ್ರತಿವಾದಿಯ ವೆಂಕಟರವಣಮ್ಮರವರಿಂದ ಪರಿಚಯವಾದರು. ಸದರಿ ವೆಂಕಟರವಣಮ್ಮರವರು ಕರಾರುಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಮೂಗಿಚಿನ್ನೇಪಲ್ಲಿ ಗ್ರಾಮದ ವಾಸಿ. ಬಾಗೇಪಲ್ಲಿಯಲ್ಲಿ ನನಗೆ ಯಾವುದೇ ಆಸ್ತಿ ಹಾಗೂ ಮನೆಗಳು ಇಲ್ಲ. ದಾವಾ ಸ್ವತ್ತು ಸ.ನಂ.44 ವಿಸ್ತೀರ್ಣ 5 ಗುಂಟೆಗೆ ಸಂಬಂಧಪಟ್ಟಿದೆ. ದಿನಾಂಕ 06.04.2015 ರಂದು ಕರಾರು ಏರ್ಪಟ್ಟಿರುತ್ತದೆ. ಸ.ನಂ.44 ರ ಸ್ವತ್ತನ್ನು ನಾನು ನೋಡಿದ್ದೇನೆ. ಕರಾರು ಏರ್ಪಡುವ ವೇಳೆಗೆ ನಾನು ದಾವಾ ಸ್ವತ್ತಿನ ಪಹಣಿ ನೋಡಿದ್ದೆ.

2014 ರಲ್ಲಿ ಸ.ನಂ.44 ರಲ್ಲಿ ಒಟ್ಟು ವಿಸ್ತೀರ್ಣ 21 ಎಕರೆ 4 ಗುಂಟೆ ಇತ್ತು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಮುಂದುವರೆದು ಪ್ರತಿವಾದಿಯ ಹೆಸರಿನಲ್ಲಿ 2 ಎಕರೆ ಜಮೀನು ಇತ್ತೆಂದು ನುಡಿಯುತ್ತಾರೆ. ಖರಾಬು ಸ್ವತ್ತು ಪ್ರತಿವಾದಿಯ ಹೆಸರಿಗೆ ಇರುವ ಬಗ್ಗೆ ಗೊತ್ತಿಲ್ಲ. 2015 ರಲ್ಲಿ ಪ್ರತಿವಾದಿಯು ಜಂಟಿ ಸ್ವಾಧೀನ ಹೊಂದಿದ್ದರು. ಪ್ರತಿವಾದಿಯ ಪರ ಆಗಿರುವ ಹಕ್ಕು ಬದಲಾವಣೆ ಪ್ರತಿಯನ್ನು ನಾನು ನೋಡಿಲ್ಲ. ಮ್ಯುಟೇಷನ್ ಪ್ರತಿಯನ್ನು ಕೇಳಿದ್ದು, ಪ್ರತಿವಾದಿಯು ಅದನ್ನು ನೀಡಲಿಲ್ಲ. ನಾನು ತಹಶೀಲ್ದಾರ್ ಕಛೇರಿಯಲ್ಲಿ ಮ್ಯುಟೇಷನ್ ಪಡೆದಿರುವುದಿಲ್ಲ. ಪ್ರತಿವಾದಿಯ ತಂದೆಗೆ ಬಂದಿರುವ ಸ್ವತ್ತಿನಲ್ಲಿ ಪ್ರತಿವಾದಿಗೆ 2 ಎಕರೆ ಮತ್ತು ಆತನ ತಮ್ಮನ ಹೆಸರಿಗೆ 2 ಎಕರೆ ಬಂದಿದೆ ಎಂದು ಪ್ರತಿವಾದಿಯು ನನಗೆ ತಿಳಿಸಿದ್ದರು. ನಾನು ಆಸಂಬಂಧ ದಾಖಲೆಗಳನ್ನು ಪರಿಶೀಲಿಸಿದ್ದು, ಪಹಣಿಯಲ್ಲಿ ಪ್ರತಿವಾದಿಯ ಹೆಸರಿಗೆ 2 ಎಕರೆ ಜಮೀನು

ಇರುತ್ತದೆ. ಪ್ರತಿವಾದಿಯ ತಂದೆಯ ಹೆಸರಿಗೆ 4 ಎಕರೆ ಜಮೀನು ಇದ್ದ ಬಗ್ಗೆ ನಾನು ದಾಖಲೆಗಳನ್ನು ನೋಡಿಲ್ಲ. ಪ್ರತಿವಾದಿಯ ತಂದೆ ಮೃತರಾಗಿದ್ದಾರೆ. ಪ್ರತಿವಾದಿಯ ತಂದೆ ಮೃತರಾದ ನಂತರ ಭಾಗ ಮಾಡಿಕೊಂಡಿದ್ದರಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ಎಕರೆ ಸ್ವತ್ತು ಪ್ರತಿವಾದಿಗೆ ಹೇಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಕರಾರು ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ – ರಾಮಲಿಂಗಾರೆಡ್ಡಿರವರ ಸ್ವತ್ತು, ಪಶ್ಚಿಮಕ್ಕೆ – ಪ್ರತಿವಾದಿಯ ಉಳಿಕೆ ಸ್ವತ್ತು, ಉತ್ತರಕ್ಕೆ – ಪ್ರತಿವಾದಿಯ ಉಳಿಕೆ ಸ್ವತ್ತು ಮತ್ತು ದಕ್ಷಿಣಕ್ಕೆ –ಪ್ರತಿವಾದಿಯ ಉಳಿಕೆ ಸ್ವತ್ತು ಇರುತ್ತದೆ ಎಂದು ನುಡಿಯುತ್ತಾರೆ. ಈ ಚಕ್ಕುಬಂದಿಯ ಸ್ವತ್ತನ್ನು ನಾನು ನೋಡಿರುವುದಿಲ್ಲ. ಕರಾರು ಕಾಲಕ್ಕೆ ಈ ಮೇಲಿನ ಚಕ್ಕುಬಂದಿಯ ಸ್ವತ್ತಿಗೆ ಪ್ರತ್ಯೇಕ ದುರಸ್ಥಿ ಮಾಡಿಸಿರುವುದಿಲ್ಲ.

ಕರಾರು ಪೂರ್ವ 10 ದಿನಗಳ ಹಿಂದೆ ಮಾತುಕತೆಯಾಗಿತ್ತು. ವೆಂಕರವಣಮ್ಮರವರ ಮನೆಗೆ ಮಾತುಕತೆಗೆ ಎಂದು ನನ್ನನ್ನು ಕರೆದಿದ್ದರು. ಮಾತುಕತೆ ವೇಳೆ ನಾನು, ಪ್ರತಿವಾದಿ ಹಾಗೂ ವೆಂಕಟರವಣಮ್ಮ ಇದ್ದೆವು. ಮಾತುಕತೆಯ ನಂತರ 10 ದಿನದಲ್ಲಿ ಕರಾರು ಏರ್ಪಟ್ಟಿತ್ತು. ಪತ್ರಬರಹಗಾರರರಿಗೆ ಪತ್ರ ಬರೆಯಲು ನಾವಿಬ್ಬರೂ ಸೂಚಿಸಿದ್ದೆವು. ಕರಾರು ಪತ್ರವನ್ನು ಉಪ-ನೋಂದಣಾಧಿಕಾರಿಗಳ ಕಛೇರಿಯ ಬಳಿ ಬರೆಯಿಸಿದ್ದೆವು. ಕರಾರು ಪತ್ರವನ್ನು ಪತ್ರಬರಹಗಾರರು ಕನ್ನಡ ಭಾಷೆಯಲ್ಲಿ ಬರೆದು ತಂದಿದ್ದರು. ಕರಾರು 11.00 ರಿಂದ 2.00 ಗಂಟೆಯವರೆಗೆ ಬರೆಯಲಾಗಿತ್ತು. ಕರಾರು ಪತ್ರಕ್ಕೆ ನಾನು ಮತ್ತು ಪ್ರತಿವಾದಿ ಮೊದಲು ಸಹಿಯನ್ನು ಮಾಡಿರುತ್ತೇವೆ. ಸದರಿ ಪತ್ರಕ್ಕೆ ವೆಂಕಟರವಣಮ್ಮ ಮತ್ತು ಮಧುಮೋಹನ್ ರೆಡ್ಡಿ ಸಹಿ ಮಾಡಿದ್ದಾರೆ. ನಾನು ರೂ.3,00,000/- ನಗದಾಗಿ ರೂ.500/- ಮುಖಬೆಲೆಯ ನೋಟುಗಳಂತೆ ಉಪ-ನೋಂದಣಾಧಿಕಾರಿಗಳ ಕಛೇರಿಯಲ್ಲಿ ಪತ್ರ ನೋಂದಣಿಯಾದ ನಂತರ ನೀಡಿದ್ದೆ. ನಾನು ನೂರಾರು ಬಾರಿ ಕರಾರು ಪತ್ರದ ಷರತ್ತುಗಳನ್ನು ಪಾಲಿಸುವಂತೆ ಪ್ರತಿವಾದಿಯನ್ನು ಕೇಳಿದ್ದೆ.

ಪ್ರತಿವಾದಿ ಸ್ಪಂದಿಸಿರಲಿಲ್ಲ. ಪ್ರತಿವಾದಿ ಕರಾರಿನ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸದಿದ್ದಾಗ, ನಾನು ನೋಟಿಸ್ಸು ನೀಡಿರುವುದಿಲ್ಲ, ಆದರೆ ಮೌಖಿಕವಾಗಿ ಕೇಳಿದ್ದೆ ಎಂದು ನುಡಿಯುತ್ತಾರೆ. 2018 ರವರೆಗೆ ಕರಾರು ಪತ್ರದ ಷರತ್ತುಗಳನ್ನು ಪಾಲಿಸಲು ಒಪ್ಪಿದ್ದರು. ನಾನು ಹಾಗೂ ವೆಂಕಟರವಣಮ್ಮರವರು 4-5 ಬಾರಿ ಕರಾರು ಪತ್ರದ ಷರತ್ತುಗಳನ್ನು ಪಾಲಿಸುವಂತೆ ಪ್ರತಿವಾದಿಯನ್ನು ಭೇಟಿ ಮಾಡಿದ್ದೆವು.

ಪ್ರತಿವಾದಿಯು ಯಾವುದೇ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಸ್ವತ್ತನ್ನು ಮಾರಾಟ ಮಾಡುವ ಅವಶ್ಯಕತೆ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ಕರಾರು ಪತ್ರವನ್ನು ನಾನು, ಸಾಕ್ಷಿಗಳು ಮತ್ತು ಪತ್ರಬರಹಗಾರರು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸ.ನಂ.21ರ ಸ್ವತ್ತು ಪೋಡಿಯಾಗಿಲ್ಲ ಹಾಗೂ ದಾವಾ ಸ್ವತ್ತು ಸಹ ಪೋಡಿಯಾಗಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತನ್ನು ನೋಡಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯಗಳು ತಿಳಿದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.